ಧಢ್.... ಎಂದು ಶಬ್ದ ಕೊಡುತ್ತಿದ್ದವು. ಭೂಮಿಕಾ ನಿಜವಾಗಿಯೂ ತತ್ತರಿಸಿದಳು. ಅದಕ್ಕೆ ಪೂರಕವಾಗಿ ಅನೇಕ ಚಟುವಟಿಕೆಗಳು ಆ ಅರ್ಧರಾತ್ರಿ ಆ ಮನೆಯಲ್ಲಿ ಜರಗಿದವು. ನೆರಳು ಬೆಳಕಿನಾಟ, ಬೆಕ್ಕು ಕಿರುಚಾಟ, ಕ್ಷಣ ಕ್ಷಣಕ್ಕೂ ಬಾಗಿಲು ಬಾರಿಸಿದ ಶಬ್ದ. ಎಲ್ಲವೂ ಕಿವಿಯ ಮೇಲೆ ಅಪ್ಪಳಿಸುತ್ತಿದ್ದವು. ಅವನ್ನು ರೆಕಾರ್ಡು ಮಾಡಲು ನೋಡಿದಳು, ಮೊಬೈಲ್ ಆನ್ ಮಾಡಿ ರೆಕಾರ್ಡರನ್ನು ಆನ್ ಮಾಡಿದಳು. ಆದರೂ ತಾನು ಓದಿದ ವಿಜ್ಞಾನ ಇದೆಲ್ಲವನ್ನೂ ಧಿಕ್ಕರಿಸಿದರೂ ಮನಸ್ಸು ಇನ್ನೂ ಇದೆಲ್ಲವನ್ನು ಪುರಸ್ಕರಿಸುತ್ತದೆ. ಕ್ಷಣ ಕ್ಷಣ ಅವನ ನೆನಪು. ಈ ಶಬ್ದಗಳೊಂದಿಗೆ ನುಸುಳಿ ಮಾಯವಾಯಿತು. ಅವನೋ ಅಥವಾ ಇವನೋ? ಯಾರಿರಬಹುದು.

ಇಲ್ಲ ಅವನೇ ಇರಬೇಕು ಇದ್ದರೆ.

ಯಾಕೆಂದರೆ ಇದೇ ಸೆಪ್ಟಂಬರ್ 7ಕ್ಕೆ ಹದಿನೆಂಟು ವರ್ಷವಾಯಿತಲ್ಲ ಎಂದು ನೆನೆದಳು. ಮೂರು ದಿನದಿಂದ ವಿಚಿತ್ರ ಡಿಪ್ರೆಷನ್‌ಗೆ ಒಳಗಾಗುತ್ತಿದ್ದ ಭೂಮಿಕಾ ಸೆಪ್ಟಂಬರ್ 7ರ ಆ ದಿನಕ್ಕಾಗಿ ಮಾನಸಿಕವಾಗಿ ಸನ್ನದ್ಧಳಾಗುತ್ತಿದ್ದಳೆ? ಆ ಸನ್ನದ್ಧತೆಯೇ ಈ ಖಿನ್ನತೆಯಾ?

ಇವು ಮಾನಸಿಕ ಉಪಕ್ರಮಗಳಲ್ಲ. ನಿಜವಾಗಿಯೂ ಈಗ ಅವನೇ ಸೃಷ್ಟಿಸಿದ ಭಯಗಳಿರಬಹುದು. ಟೀವಿ ಆನ್ ಮಾಡಿದಳು. ಟೀವಿಯಲ್ಲಿ ಒಂದು ಕಡೆ ಮಿಡ್‌ನೈಟ್ ಲೈಂಗಿಕ ಸಿನಿಮಾಗಳು ಪ್ರಸಾರವಾಗುತ್ತಿದ್ದವು. ಒಂದು ಕ್ಷಣ ದೃಷ್ಟಿ ನೆಟ್ಟಳು. ಒಬ್ಬರು ಇಬ್ಬರಿಗೆ ಇಬ್ಬರು ಒಬ್ಬರಿಗೆ. ಮತ್ತೆ ಹೇಗೆಂಬ ಭಂಗಿಗಳು ಕ್ಷಣ ನೋಡಬೇಕೆನಿಸಿದರೂ ತಟ್ಟನೆ ದೇವರ ಚಾನಲ್‌ಗೆ ವರ್ಗಾಯಿಸಿದಳು. ದೇವರು

